For More Question Papers Visit - www.pediawikiblog.com

# ದ್ವಿತೀಯ ಪಿ.ಯು.ಸಿ. ಪೂರ್ವಸಿದ್ಧತಾ ಪರೀಕ್ಷೆ, ಜನವರಿ – 2017

**II**

ಸಮಯ : 3.15 ಗಂಟೆ | ಅರ್ಥಶಾಸ್ತ್ರ - 22 | ಅಂಕಗಳು : 100

## ಎ-ವಿಭಾಗ

**I ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯಗಲ್ಲಿ ಉತ್ತರಿಸಿ.** 1x10=10

1. ಮಾದರಿ ಅರ್ಥಶಾಸ್ತ್ರ ಎಂದರೇನು ?
2. ಬೇಡಿಕೆ ನಿಯಮವನ್ನು ತಿಳಿಸಿ ?
3. ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮವನ್ನು ಪರಿಚಯಿಸಿದವರಾರು ?
4. ಸೀಮಾಂತ ವೆಚ್ಚ ಎಂದರೇನು ?
5. ಕೆಲಜನ ಸ್ವಾಮ್ಯ ಎಂದರೇನು ?
6. ಸಮಗ್ರ ಅರ್ಥಶಾಸ್ತ್ರ ಎಂದರೇನು ?
7. GDPಯಿಂದ NDP ಪಡೆಯಲು ಏನನ್ನು ಕಳೆಯಬೇಕು ?
8. ATM - ಅನ್ನು ವಿಸ್ತರಿಸಿ.
9. ಗುಣಕ ಎಂದರೇನು ?
10. ವಿದೇಶಿ ವಿನಿಮಯ ದರದ ಅರ್ಥವನ್ನು ತಿಳಿಸಿ.

## ಬಿ-ವಿಭಾಗ

**II ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** 2x10=20

11. ಅರ್ಥ ವ್ಯವಸ್ಥೆಯ ಮೂಲ ಕಾರ್ಯಗಳಾವುವು ?
12. ಒಟ್ಟು ತುಷ್ಟಿಗುಣ ಮತ್ತು ಸೀಮಾಂತ ತುಷ್ಟಿಗುಣದ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ.
13. ಶ್ರಮದ ನಾಲ್ಕು ಘಟಕಗಳು 'X'ನ70 ಘಟಕಗಳನ್ನು ಮತ್ತು ಶ್ರಮದ 5 ಘಟಕಗಳು 'X'ನ 75 ಘಟಕಗಳನ್ನು ಉತ್ಪಾದಿಸಿದರೆ ಸೀಮಾಂತ ಮತ್ತು ಸರಾಸರಿ ಉತ್ಪನ್ನಗಳನ್ನು ಕಂಡು ಹಿಡಿಯಿರಿ.
14. ಪೂರೈಕೆಯ ನಾಲ್ಕು ನಿರ್ಧಾರಕಗಳನ್ನು ಹೆಸರಿಸಿ.
15. ಅಪರಿಪೂರ್ಣ ಪೈಪೋಟಿ ಪೇಟೆಯ ಮೂರು ರೂಪಗಳನ್ನು ಹೆಸರಿಸಿ.
16. ಸೂಕ್ಷ್ಮ ಮತ್ತು ಸಮಗ್ರ ಅರ್ಥಶಾಸ್ತ್ರದ ಅಗ್ರಗಣ್ಯರಾರು ?
17. ನಿವ್ವಳ ಹೂಟೆ ಮತ್ತು ಬಂಡವಾಳದ ನಡುವೆ ಯಾವುದು ದಾಸ್ತಾನು ಮತ್ತು ಯಾವುದು ಹರಿವು ಆಗಿದೆ ?
18. ಸಂಕುಚಿತ ಹಣ ಮತ್ತು ವಿಶಾಲ ಹಣದ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.
19. ಹೂಡಿಕೆಯ ವಿಧಗಳನ್ನು ಹೆಸರಿಸಿ.
20. ಕೋಶೀಯ ನೀತಿಯ ಯಾವುದಾದರೂ ನಾಲ್ಕು ಉದ್ದೇಶಗಳನ್ನು ಹೆಸರಿಸಿ.
21. ನೇರ ಮತ್ತು ಪರೋಕ್ಷ ತೆರಿಗೆಯ ವ್ಯತ್ಯಾಸವನ್ನು ತಿಳಿಸಿ.
22. ನಾಮಮಾತ್ರ ಮತ್ತು ನೈಜ ವಿನಿಮಯ ದರಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

## ಸಿ-ವಿಭಾಗ

**III ಈ ಕೆಳಗಿನ ಯಾವುದಾದರೂ ಎಂಟು ಪ್ರಶ್ನೆಗಳಿಗೆ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ.** 8x5=40

23. ಮಿಶ್ರ ಅರ್ಥವ್ಯವಸ್ಥೆಯ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.
24. ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮವನ್ನು ವಿವರಿಸಿ.
25. ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ವರ್ಗೀಕರಿಸಿ ಮತ್ತು ಅವುಗಳನ್ನು ರೇಖಾಚಿತ್ರಗಳೊಂದಿಗೆ ವಿವರಿಸಿ.
26. ಬದಲಾಗುವ ಪರಿಮಾಣದ ನಿಯಮವನ್ನು ವಿವರಿಸಿ.
27. ವಿವಿಧ ಅಲ್ಪಾವಧಿ ವೆಚ್ಚಗಳನ್ನು ಚರ್ಚಿಸಿ.
28. ಒಂದು ಪರಿಪೂರ್ಣ ಪೈಪೋಟಿ ಮೂರುಕಟ್ಟೆಯಲ್ಲಿನ TR. AR ಮತ್ತು MRಗಳ ನಡುವಿನ ಸಂಬಂಧಗಳನ್ನು ರೇಖಾಚಿತ್ರದ ಮೂಲಕ ವಿವರಿಸಿ.
29. ಸ್ವಾಮ್ಯಯುತ ಪೈಪೋಟಿ ಪೇಟೆಯ ಲಕ್ಷಣಗಳನ್ನು ಬರೆಯಿರಿ.
30. ಸಮಗ್ರ ಅರ್ಥಶಾಸ್ತ್ರದ ವ್ಯಾಪ್ತಿಯನ್ನು ಚರ್ಚಿಸಿ.
31. ಹಣದ ಪ್ರಾಥಮಿಕ ಕಾರ್ಯಗಳನ್ನು ವಿವರಿಸಿ.
32. ಕೇನ್ಸ್‌ರವರ ಅನುಬೋಗ ಬಿಂಬಕವನ್ನು ವಿವರಿಸಿ.

(ಪು.ತಿ.ನೋ.)

For More Question Papers Visit - www.pediawikiblog.com

For More Question Papers Visit - www.pediawikiblog.com



33. ಕೊರತೆ ಹಣಕಾಸಿನ ಪ್ರಕಾರಗಳನ್ನು ವಿವರಿಸಿ.
34. ಪಾವತಿ ಶಿಲ್ಕಿನ ರತಚನೆಯನ್ನು ವಿವರಿಸಿ.

ಡಿ-ವಿಭಾಗ

V ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ನಲವತ್ತು ವಾಕ್ಯಗಳಲ್ಲಿ ಉತ್ತರಿಸಿ. 2x10=20

35. ಔದಾಸಿನ್ಯ ವಕ್ರರೇಖೆಯನ್ನು ಬಳಸಿ ಒಬ್ಬ ಅನುಬೋಗಿಯು ಹೇಗೆ ಸಮತೋಲನವನ್ನು ತಲುಪುತ್ತಾನೆ ಎಂಬುದನ್ನು ವಿವರಿಸಿ.
36. ಪರಿಪೂರ್ಣ ಪೈಪೋಟಿ ಮೂರುಕಟ್ಟೆಯಲ್ಲಿ ಉತ್ಪಾದಕರು ಮತ್ತು ಅನುಬೋಗಿಗಳನ್ನು ಕಾಣದ ಕೈ ಸಮತೋಲನದತ್ತ ಹೇಗೆ ಕೊಂಡೊಯ್ಯುತ್ತದೆ ಎಂಬುದನ್ನು ಪ್ರಸ್ತುತಪಡಿಸಿ.
37. ರಾಷ್ಟ್ರೀಯ ವರಮಾನದ ಸಮಗ್ರ ಆರ್ಥಿಕ ಅನನ್ಯತೆಗಳನ್ನು ವಿವರಿಸಿ.
38. ಭಾರತೀಯ ರಿಜರ್ವ ಬ್ಯಾಂಕಿನ ಕಾರ್ಯಗಳನ್ನು ವಿವರಿಸಿ.

ಇ-ವಿಭಾಗ

V ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ. 2x5=10

38. ನೀವು ಮಾರುಕಟ್ಟೆಯಲ್ಲಿ ನೂರು ರೂಪಾಯಿಗಳನ್ನು ಮಾತ್ರ ಹೊಂದಿದ್ದೀರಿ ಎಂದು ಭಾವಿಸಿಕೊಳ್ಳಿ. ಬಜೆಟ್‌ಸೆಟ್‌ನ್ನು ರೂಪಿಸಿ ಮತ್ತು ಬಜೆಟ್‌ಗೆರೆಯನ್ನು ಎಳೆಯಿರಿ.

ಅಂಧ ವಿದ್ಯಾರ್ಥಿಗಳಿಗೆ ಮಾತ್ರ

'ಸರ್ಕಾರ ಎಲ್ಲರಿಗೂ ಪ್ರಾಥಮಿಕ ಆರೋಗ್ಯ ಸೇವೆಯನ್ನು ಒದಗಿಸಬೇಕು' ಇದೊಂದು ಮಾದರಿ ಆರ್ಥಿಕ ಹೇಳಿಕೆಯಾಗಿದೆ. ಇದನ್ನು ವಿವರಿಸಿ.

40. ಸರಕಿನ ಮಾರುಕಟ್ಟೆ ಬೇಡಿಕೆ ರೇಖೆ ಮತ್ತು ಏಕಸ್ವಾಮ್ಯ ಉದ್ಯಮ ಘಟಕವು ಉತ್ಪಾದಿಸುವ ಸರಕಿನ ಒಟ್ಟು ಉತ್ಪಾದನಾ ವೆಚ್ಚವನ್ನು ಈ ಕೆಳಗಿನ ಅನುಸೂಚಿಯಲ್ಲಿ ನೀಡಲಾಗಿದೆ. ಈ ಅನುಸೂಚಿಯಲ್ಲಿನ ಅಂಕಿ-ಅಂಶಗಳ ಮಾಹಿತಿಯನ್ನು ಆಧರಿಸಿ ಈ ಕೆಳಗಿನವುಗಳನ್ನು ಲೆಕ್ಕ ಹಾಕಿ.

| ಪ್ರಮಾಣ | 0 | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|---|
| ಬೆಲೆ (ರೂ.ಗಳಲ್ಲಿ) | 52 | 44 | 37 | 31 | 26 | 22 | 19 | 16 | 13 |
| ಒಟ್ಟು ವೆಚ್ಚ (ರೂ.ಗಳಲ್ಲಿ) | 20 | 60 | 85 | 100 | 102 | 105 | 109 | 115 | 125 |

a) MR ಮತ್ತು MCಯ ಅನುಸೂಚಿ ಕಂಡು ಹಿಡಿಯಿರಿ.
b) ಯಾವ ಪ್ರಮಾಣಗಳಲ್ಲಿ MR ಮತ್ತು MCಗಳ ಪ್ರಮಾಣಗಳು ಸಮವಾಗಿರುತ್ತವೆ. ತಿಳಿಸಿ.
c) ಉತ್ಪನ್ನದ ಸಮತೋಲನ ಪ್ರಮಾಣ ಮತ್ತು ಸರಕಿನ ಸಮತೋಲನ ಬೆಲೆಯನ್ನು ಲೆಕ್ಕಾಚಾರ ಮಾಡಿ.

ಅಂಧ ವಿದ್ಯಾರ್ಥಿಗೆ ಮಾತ್ರ

ಈ ಕೆಳಗೆ ನೀಡಿರುವ ಎರಡು ಉತ್ಪನ್ನಗಳ ವಿವಿಧ ಬ್ರಾಂಡ್‌ಗಳ ಹೆಸರನ್ನು ಬರೆಯಿರಿ. (ತಲಾ ಐದು ಮಾತ್ರ)
ಟೂತ್‌ಪೇಸ್ಟ್ ಮತ್ತು ಸೋಪು

41. ವಾಣಿಜ್ಯ ಬ್ಯಾಂಕ್‌ಗಳ ಪತ್ತು ನಿರ್ಮಾಣ ಪ್ರಕ್ರಿಯೆಯನ್ನು ಉದಾಹರಣೆ ಸಹಾಯದಿಂದ ಬರೆಯಿರಿ.

For More Question Papers Visit - www.pediawikiblog.com